**ಸಾಕ್ಷಿಯನ್ನು ದಿನಾಂಕಃ 14.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲದಲ್ಲಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿರುತ್ತಾರೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎಂ.ಸಿ.ಎಸ್, ವಕೀಲರಿಂದಃ**

ನನಗೆ ಕಣ್ಣಿನ ದೃಷ್ಟಿ ಸರಿಯಾಗಿರುವುದಿಲ್ಲ. ಅದೇ ರೀತಿ ನನಗೆ ಓಡಾಡಲು ಆಗುವುದಿಲ್ಲ. ನಾನು ಮನೆಯಿಂದ ಹೊರಗಡೆ ಎಲ್ಲಿಯೂ ಹೋಗುವುದಿಲ್ಲ ಎಂದರೆ ಸರಿ. ಗಲಾಟೆ ನಡೆಯಿತು ಎಂದು ಹೇಳಿದ ದಿವಸ, ನಾನು ಕಾಳು ಬಿತ್ತನೆ ಮಾಡಲು ಜಮೀನಿಗೆ ಹೋಗಿದ್ದೆ. ಜಮೀನಿಗೆ ಬೆಳಿಗ್ಗೆ 10.00 ಗಂಟೆಗೆ ಬಂದಿದ್ದೆವು. ಆರೋಪಿಗಳು ಜಗಳಕ್ಕೆ ಬಂದಿದ್ದರಿಂದ ನಾವು ಕಾಳು ಬಿತ್ತನೆ ಮಾಡಿರುವುದಿಲ್ಲ. ನಂತರ ನಾವು ಠಾಣೆಗೆ ಹೋಗಿರುತ್ತೇವೆ. ಚಾಸಾ-2 ನನಗೆ ಬಾವನಾಗಬೇಕು. ಸಿದ್ದನಾಯ್ಕ ಮತ್ತು ಚೌಡನಾಯ್ಕ ಅಣ್ಣ-ತಮ್ಮಂದಿರು ಮತ್ತು ಇವರಿಬ್ಬರ ಜಮೀನುಗಳು ಅಕ್ಕ-ಪಕ್ಕದಲ್ಲಿರುತ್ತವೆ ಎಂದರೆ ಸರಿ. ಸಿದ್ದನಾಯ್ಕರವರ ಜಮೀನನ್ನು 3 ನೇ ಆರೋಪಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. 3 ನೇ ಆರೋಪಿ ಕ್ರಯಕ್ಕೆ ಪಡೆದಿರುವ ಜಮೀನು ತನಗೂ ಸೇರಬೇಕೆಂದು ನನ್ನ ಮಗ 3 ನೇ ಆರೋಪಿಯ ವಿರುದ್ಧ ಒಂದು ಸಿವಿಲ್ ವ್ಯಾಜ್ಯ ದಾಖಲಿಸಿರುತ್ತಾರೆ ಎಂದರೆ ಸರಿ. ಗಲಾಟೆ ನಡೆಯಿತು ಎಂದು ಹೇಳಿದ ಸಂದರ್ಭದಲ್ಲಿ ಮಧ್ಯಾಹ್ನ 1.00 ಗಂಟೆಯಾಗಿತ್ತು. ಆ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾವು ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇವೆ. ದೂರನ್ನು ಯಾರು ಬರೆದಿರುತ್ತಾರೆ

ಎಂದು ನನಗೆ ಗೊತ್ತಿಲ್ಲ. 3 ನೇ ಆರೋಪಿ ಜಮೀನು ಕ್ರಯಕ್ಕೆ ಪಡೆದ ದಿನಾಂಕದಿಂದ ನಮ್ಮ ಮತ್ತು ಅವರ ನಡುವೆ ವೈ-ಮನಸ್ಸು ಇರುತ್ತದೆ ಎಂದರೆ ಸರಿ. ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಜಮೀನನ್ನು ಕ್ರಯಕ್ಕೆ ಪಡೆದಿರುವುದರಿಂದ ಹೇಗಾದರೂ ಆ ಜಮೀನನ್ನು ಬಿಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ದೊಣ್ಣೆಯಿಂದ ನನ್ನ ಎಡತೋಳು ಮತ್ತು ಎಡತೊಡೆಗೆ ಹೊಡೆದಿರುತ್ತಾರೆ. 1 ನೇ ಆರೋಪಿ ನನಗೆ ಬೋಳಿಮಗಳೆ, ಸೂಳೆ ಮಗಳೆ ಎಂದು ಬೈದಿರುತ್ತಾರೆ. ಆರೋಪಿಗಳು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆಯಿತು ಎಂದು ಹೇಳಿದ ಸಂದರ್ಭದಲ್ಲಿ ವಿವಾದಿತ ಜಮೀನಿನಲ್ಲಿ 3 ನೇ ಆರೋಪಿ ಟ್ರ್ಯಾಕ್ಟರ್ ನಿಂದ ಉಳುಮೆ ಮಾಡುತ್ತಿದ್ದರು. 3 ನೇ ಆರೋಪಿ 1 ಎಕರೆ 15 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಆರೋಪಿಗಳು ನಮ್ಮ ಜಮೀನಿಗೆ ಯಾವುದೇ ರೀತಿ ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಘಟನೆ ನಡೆದ 3 ದಿವಸಗಳ ನಂತರ ನಮ್ಮ ಜಮೀನಿನ ಬಳಿ ಬಂದಿರುತ್ತಾರೆ. ಪೊಲೀಸರು ನಮ್ಮ ಜಮೀನಿಗೆ ಬಂದು ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಕಾಡಯ್ಯರವರಿಂದ ಜಮೀನಿನನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ದೊಣ್ಣೆಯನ್ನು ಪೊಲೀಸರಿಗೆ ನಾನೇ ಕೊಟ್ಟಿರುತ್ತೇನೆ. ಮುದ್ದೆ ಮಾಲು-1 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯು–01**

**ಮರುವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**